# ಕನ್ನಡ ಸವಿ-ನುಡಿ

“ಕನ್ನಡವೇ ಸತ್ಯ ಕನ್ನಡವೇ ನಿತ್ಯ”

**PDO/FDA/SDA/GROPU C/BMTC/VAO/KPTCL**

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅತ್ಯಂತ ಉಪಯುಕ್ತ ಕೈ ಬರಹ ಟಿಪ್ಪಣಿಯಾಗಿದೆ

- **HSTR**
- **GPSTR**
- **PSTR**
- **Group-C**



KEA ಮತ್ತು KPSC ನಡೆಸುವ ಎಲ್ಲಾ ಕನ್ನಡ ಪರೀಕ್ಷೆಗಳಿಗೆ ಅತಿ ಉಪಯುಕ್ತವಾಗಿದೆ

- ಕನ್ನಡ ವ್ಯಾಕರಣ
- ಕನ್ನಡ ಸಾಹಿತ್ಯ ಚರಿತ್ರೆ
- TET ಪ್ರಶ್ನೆ ಪತ್ರಿಕೆ ಉತ್ತರಗಳೊಂದಿಗೆ
- GPSTR ಪ್ರಶ್ನೆ ಪತ್ರಿಕೆ ಉತ್ತರಗಳೊಂದಿಗೆ



ಶರಣಪ್ಪಗೌಡ.ರು.ಚಿಕ್ಕನಗೌಡ್ರು
ಕನ್ನಡ ಸಂಪನ್ಮೂಲ ಉಪನ್ಯಾಸಕರು
MA.BEd.KSET.TET.

ನಾಗರಾಜ ಪುಸ್ತಕ ಮಳಿಗೆ ಪಬ್ಲಿಕೇಶನ್ಸ್ 73384 74393

| | | |
|---|---|---|
| 1) | **ಕನ್ನಡ ವರ್ಣಮಾಲೆ** | |
| 1.1 | ಸ್ವರಗಳು | |
| 1.2 | ವ್ಯಂಜನಗಳು | |
| 1.3 | ಯೋಗವಾಹಗಳು | |
| 1.4 | ಸಂಧ್ಯಾಕ್ಷರಗಳು | |
| 1.5 | ಗುಣಿತಾಕ್ಷರಗಳು | |
| 1.6 | ಸಂಯುಕ್ತಾಕ್ಷರಗಳು | |
| 1.7 | ವರ್ಣೋತ್ಪತ್ತಿ ಸ್ಥಾನ | |
| **2)** | **ನಾಮಪದಗಳು** | |
| 2.1 | ನಾಮಪ್ರಕೃತಿಗಳು | |
| 2.2 | ವಿಭಕ್ತಿ ಪ್ರತ್ಯಯಗಳು | |
| 2.3 | ನಾಮ ಪ್ರಕೃತಿಯ ವಿಧಗಳು | |
| 2.4 | ಸಮಾಸಗಳು | |
| 2.5 | ಕೃದಂತಗಳು | |
| 2.6 | ತದ್ದಿತಾಂತಗಳು | |
| 2.7 | ಸರ್ವನಾಮಗಳು | |
| **3)** | **ಕ್ರಿಯಾಪದಗಳು** | |
| 3.1 | ಧಾತುಗಳು | |
| 3.2 | ಧಾತುಗಳ ಪ್ರಕಾರಗಳು | |
| 3.3 | ಕಾಲಸೂಚಕ ಪ್ರತ್ಯಯಗಳು | |
| 3.4 | ಆಖ್ಯಾತ ಪ್ರತ್ಯಯಗಳು | |
| 3.5 | ಕ್ರಿಯಾಪದದ ಪ್ರಕಾರಗಳು | |
| 3.6 | ವಿದ್ಯರ್ಥಕ ಕ್ರಿಯಾಪದಗಳು | |
| 3.7 | ನಿಶೇದಾರ್ಥಕ ಕ್ರಿಯಾಪದ | |
| 3.8 | ಸಂಭವನಾರ್ಥಕ ಕ್ರಿಯಾಪದ | |
| 3.9 | ಸಾಪೇಕ್ಷ ಕ್ರಿಯಾಪದ | |
| **4)** | **ಸಂಧಿಗಳು** | |
| 4.1 | ಸಂಧಿಗಳ ಅರ್ಥ | |
| 4.2 | ಸಂಧಿಗಳ ಪ್ರಕಾರಗಳು | |
| 4.3 | ಕನ್ನಡ ಸಂಧಿಗಳು | |
| 4.4 | ಸಂಸ್ಕೃತ ಸಂಧಿಗಳು | |
| **5)** | **ಅವ್ಯಯ** | |
| 5.1 | ಅವ್ಯಯ ಪ್ರಕಾರಗಳು | |
| **6)** | **ವಚನಗಳು** | |

| | | |
|---|---|---|
| 6.1 | ವಚನದ ಅರ್ಥ | |
| 6.2 | ವಚನಗಳ ಪ್ರಕಾರಗಳು | |
| **7)** | **ಅಲಂಕಾರಗಳು** | |
| 7.1 | ಅಲಂಕಾರದ ಅರ್ಥ | |
| 7.2 | ಶಬ್ದಾಲಂಕಾರಗಳು | |
| 7.3 | ಅರ್ಥಾಲಂಕಾರಗಳು | |
| **8)** | **ಛಂದಸ್ಸು** | |
| 8.1 | ಛಂದಸ್ಸಿನ ಅರ್ಥ | |
| 8.2 | ಛಂದಸ್ಸಿನ ವ್ಯಾಖ್ಯೆಗಳು | |
| 8.3 | ಛಂದಸ್ಸಿನ ಪ್ರಮುಖ ಗ್ರಂಥಗಳು | |
| 8.4 | ಛಂದಸ್ಸಿನ ಪ್ರಮುಖ ಅಂಶಗಳು | |
| | 1. ಪಾಸ | |
| | 2. ಮಾತ್ರೆ | |
| | 3. ಯತಿ | |
| | 4. ಅಕ್ಷರಗಣಗಳು | |
| | 5. ಪ್ರಾಸ | |
| | 6. ಲಯ | |
| | 7. ಗಣಗಳು | |
| 8.5 | ಗಣಗಳ ಪ್ರಕಾರಗಳು | |
| | 1. ಅಕ್ಷರಗಣಗಳು | |
| | • ಯಮಾತಾರಾಜಭಾನಸಲಗಂ | |
| | • ಖ್ಯಾತ ಕರ್ನಾಟಕ ವೃತ್ತಗಳು | |
| | 2. ಮಾತ್ರಾಗಣಗಳು | |
| | • ಕಂದಪದ್ಯ | |
| | • ಷಟ್ಪದಿ | |
| | • ರಗಳಗಳು | |
| | 3. ಅಂಶಗಣಗಳು | |
| | • ಬ್ರಹ್ಮಗಣ | |
| | • ವಿಷ್ಣುಗಣ | |
| | • ರುದ್ರಗಣ | |
| | • ತ್ರಿಪದಿಗಳು | |
| | • ಸಾಂಗತ್ಯ | |
| **9)** | **ಕರ್ತರಿ, ಕರ್ಮಣಿ ಪ್ರಯೋಗಗಳು** | |
| **10)** | **ತತ್ಸಮ ತದ್ಭವಗಳು** | |
| **11)** | **ದೇಶಿ ಅನ್ಯದೇಶಿಯ ಪದಗಳು** | |
| **12)** | **ಗ್ರಾವ್ಯ ಮತ್ತು ಗ್ರಾಂಥಿಕ ಪದಗಳು** | |

| | | |
|---|---|---|
| **13)** | **ದ್ವಿರುಕ್ತಿಗಳು** | |
| **14)** | **ಜೋಡಿ ಪದಗಳು** | |
| **15)** | **ಸಮನಾರ್ಥಕ ಪದಗಳು** | |
| **16)** | **ವಿರುದ್ಧಾರ್ಥಕ ಪದಗಳು** | |
| **17)** | **ನುಡಿಗಟ್ಟುಗಳು** | |
| **18)** | **ಸ್ಥಾನಪಲ್ಲಟ** | |
| **19)** | **ಲೇಖನ ಚಿಹ್ನೆಗಳು** | |
| **20)** | **ಪತ್ರಲೇಖನಗಳು** | |
| **21)** | **ಗಾದೆಗಳು** | |
| **22)** | **ಪ್ರಬಂಧಗಳು** | |
| **23)** | **ಕನ್ನಡ ಸಾಹಿತ್ಯ ಚರಿತ್ರೆ** | |
| 23.1 | ಹಳಗನ್ನಡ ಕವಿಗಳು | |
| 23.2 | ನಡುಗನ್ನಡ ಕವಿಗಳು | |
| 23.3 | ದಾಸ ಸಾಹಿತ್ಯ | |
| 23.4 | ಸಾಂಗತ್ಯ ಸಾಹಿತ್ಯ | |
| 23.5 | ಹೊಸಗನ್ನಡ ಸಾಹಿತ್ಯ ಪ್ರಕಾರಗಳು | |
| 23.6 | ರಾಷ್ಟ್ರ ಕವಿಗಳು | |
| 23.7 | ಮಹಾಕಾವ್ಯಗಳು | |
| 23.8 | ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು | |
| 23.9 | ಪ್ರಮುಖ್ಯ ಪದ್ಯಗಳು ಮತ್ತು ಕವಿಗಳು | |
| 23.10 | ಸಂದೇಹದಿಂದ ಮೂಡಿದ ಕನ್ನಡದ ಪ್ರಾಮುಖ್ಯ ಕೃತಿಗಳು ಹಾಗೂ ಕವಿಗಳು | |
| 23.11 | ಕನ್ನಡದ ಪ್ರಮುಖ ಶಾಸನಗಳು | |
| | 1. ಹಲ್ಮಿಡಿ ಶಾಸನ | |
| | 2. ಬಾದಾಮಿ ಶಾಸನ | |
| | 3. ಗಂಗಾಧರಂ ಶಾಸನ | |
| | 4. ಬ್ರಹ್ಮಗಿರಿ ಶಾಸನ | |
| 23.12 | ಕನ್ನಡ ಸಾಹಿತ್ಯ ಸಮ್ಮೇಳನಗಳು | |
| **24)** | **ಪ್ರಶ್ನೆ ಪತ್ರಿಕೆಗಳು ಉತ್ತರಗಳೊಂದಿಗೆ** | |
| | TET-2014 | |
| | TET-2015 | |
| | TET-2017 | |
| **25)** | **GPSTR ಪ್ರಶ್ನೆ ಪತ್ರಿಕೆಗಳು ಉತ್ತರಗಳೊಂದಿಗೆ** | |
| | 2022 PAPER-I | |
| | 2022 PAPER-II | |
| | 2019 GPSTR PAPER-I | |

| | | |
|---|---|---|
| | 2019 GPSTR PAPER-II | |
| | 2017 GPSTR PAPER-I | |
| | 2017 GPSTR PAPER-II | |

# -: ಕನ್ನಡ ವರ್ಣಮಾಲೆ :-

ಒಂದು ಭಾಷೆಯನ್ನು ಕ್ರಮಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಅಧ್ಯಯನ ಮಾಡುವ ಶಾಸ್ತ್ರಕ್ಕೆ ವ್ಯಾಕರಣ ಎಂದು ಕರೆಯುತ್ತಾರೆ.

ಅಥವಾ

ಶಬ್ದಗಳ ಸಾಧುತ್ವವನ್ನು ಅಂದರೆ, ಪ್ರಯೋಗಾತ್ಮಕವಾಗಿ ನಿರೂಪಿಸುವ ಶಾಸ್ತ್ರಕ್ಕೆ ವ್ಯಾಕರಣ ಎಂದು ಕರೆಯುತ್ತಾರೆ.

## ವ್ಯಾಕರಣ ಗ್ರಂಥಗಳು :-

1) 1 ನೇ ನಾಗವರ್ಮ [ಕ್ರಿ.ಶ 990] - ಛಂದೋಂಬುಧಿ

2) 2 ನೇ ನಾಗವರ್ಮ, 1) ಕಾವ್ಯಾವಲೋಕನ
   2) ಕರ್ನಾಟಕ ಭಾಷಾಭೂಷಣ
   3) ಛಂದೋವಿಚಿತಿ [ಲಭ್ಯವಿಲ್ಲ]

3) ಕೇಶಿರಾಜನ ಶಬ್ದಮಣಿ ದರ್ಪಣ

4) ಭಟ್ಟಾಕಳಂಕನ - ಶಬ್ದಾನುಶಾಸನ

## ವರ್ಣಮಾಲೆ :-

ವರ್ಣ ಎಂದರೆ ಅಕ್ಷರ, ಮಾಲೆ ಎಂದರೆ ಸಮೂಹ, ಅಂದರೆ ಅಕ್ಷರಗಳ ಸಮೂಹವನ್ನು ವರ್ಣಮಾಲೆ ಎಂದು ಕರೆಯುತ್ತಾರೆ.

* 'ಕ್ಷರ' ಎಂದರೆ ನಾಶ, 'ಅಕ್ಷರ' ಎಂದರೆ ನಾಶವಿಲ್ಲದ್ದು
* ಅಕ್ಷರಗಳಿಗೆ '2' ರೂಪಗಳಿರುತ್ತವೆ.

  1) ಚಾಕ್ಷುಷ ರೂಪ [ನೋಡುವುದು]

  2) ಶ್ರವಣ ರೂಪ [ಕೇಳುವುದು]

* ಶುದ್ಧಾಕ್ಷರ :- ಒಡೆದು ಮತ್ತೆ ಬರೆಯಲು ಬರುವಂತಹ ಅಕ್ಷರಗಳನ್ನು ಶುದ್ಧಾಕ್ಷರ ಎಂದು ಕರೆಯುತ್ತಾರೆ.

→ ಕೇಶಿರಾಜನ ಪ್ರಕಾರ ಒಟ್ಟು '47' ಶುದ್ಧಾಕ್ಷರಗಳಿವೆ.

→ 2 ನೇ ನಾಗವರ್ಮನ ಪ್ರಕಾರ ಒಟ್ಟು 52 ಶುದ್ಧಾಕ್ಷರಗಳಿವೆ.

→ ಹೊಸಗನ್ನಡ ವರ್ಣಮಾಲೆಯಲ್ಲಿ '49' ಅಕ್ಷರಗಳಿವೆ.

* ಅ ಕಾರದಿಂದ ಳ ಕಾರದವರೆಗಿನ ಇರುವ 49 ಅಕ್ಷರಗಳನ್ನು ವರ್ಣಮಾಲೆ ಎಂದು ಕರೆಯುತ್ತಾರೆ.

**ವರ್ಣಮಾಲೆಯ ಪ್ರಕಾರಗಳು :-**

ಕನ್ನಡ ವರ್ಣಮಾಲೆಯಲ್ಲಿ '3' ಪ್ರಕಾರಗಳಾಗಿ ವಿಂಗಡಿಸಲಾಗಿದೆ, ಅವುಗಳೆಂದರೆ.

1. ಸ್ವರಗಳು.
2. ವ್ಯಂಜನಗಳು.
3. ಯೋಗವಾಹಗಳು.

1. **ಸ್ವರಗಳು :-** ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರಗಳನ್ನು ಸ್ವರಗಳು ಎಂದು ಕರೆಯುತ್ತಾರೆ.

— ಕನ್ನಡದಲ್ಲಿ ಒಟ್ಟು 13 ಸ್ವರಗಳಿವೆ.

**ಉದಾ:** ಅ, ಆ, ಇ, ಈ, ಉ, ಊ, ಋ, ಎ, ಏ, ಐ, ಒ, ಓ, ಔ.

**ಸ್ವರಗಳ ಪ್ರಕಾರಗಳು :-**

ಸ್ವರಗಳನ್ನು ಮುಖ್ಯವಾಗಿ 3 ಪ್ರಕಾರವಾಗಿ ವಿಂಗಡಿಸಲಾಗಿದೆ, ಅವುಗಳೆಂದರೆ.

1. ಹ್ರಸ್ವಸ್ವರ.
2. ದೀರ್ಘಸ್ವರ.
3. ಪ್ಲುತಸ್ವರ.

1. ಹ್ರಸ್ವಸ್ವರ :- ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಗಳನ್ನು ಹ್ರಸ್ವಸ್ವರ ಎನ್ನುವರು.

→ ಕನ್ನಡದಲ್ಲಿ 6 ಹ್ರಸ್ವಸ್ವರಗಳಿವೆ.

**ಉದಾ:** ಅ, ಇ, ಉ, ಋ, ಎ, ಒ.

2. ದೀರ್ಘಸ್ವರ :- ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಗಳನ್ನು ದೀರ್ಘಸ್ವರ ಎನ್ನುವರು.

→ ಕನ್ನಡದಲ್ಲಿ 7 ದೀರ್ಘಸ್ವರಗಳಿವೆ.

**ಉದಾ:-** ಆ, ಈ, ಊ, ಏ, ಐ, ಓ, ಔ.

೩. ಪ್ಲುತಸ್ವರ :- ಮೂರು ಅ ಮಾತ್ರೆಗಿಂತ ಹೆಚ್ಚು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಗಳನ್ನು ಪ್ಲುತಸ್ವರ ಎನ್ನುವರು.

ಉದಾ: ಅಂಕ್ಕಾಽಽಽ, ದೇವರೇಽಽಽ, ಅಮ್ಮಾಽಽಽ, ಅಪ್ಪಾಽಽಽ

* ಪ್ಲುತಸ್ವರದ ಚಿಹ್ನೆಯನ್ನು ಆಂಗ್ಲ ಭಾಷೆಯ 'S' ಸಂಕೇತದಿಂದ ಗುರುತಿಸುತ್ತಾರೆ.
* ಕನ್ನಡದಲ್ಲಿ ಪ್ಲುತಸ್ವರದ ಚಿಹ್ನೆಗೆ 'ಅವಗ್ರಹ' ಚಿಹ್ನೆ ಎಂದು ಕರೆಯುತ್ತಾರೆ.

# ಸಂಧ್ಯಾಕ್ಷರಗಳು :-

ಎರಡು ಸ್ವರಗಳು ಸೇರಿ ಆದ ಅಕ್ಷರಗಳನ್ನು ಸಂಧ್ಯಾಕ್ಷರಗಳು ಎಂದು ಕರೆಯುತ್ತಾರೆ.

ಉದಾ: ಐ, ಔ.

* ಕನ್ನಡದಲ್ಲಿ '೨' ಸಂಧ್ಯಾಕ್ಷರಗಳಿವೆ.

→ ಸ್ವರಗಳನ್ನು ಉಚ್ಚಾರಣೆಯ ವ್ಯತ್ಯಾಸದಿಂದ '೨' ಭಾಗಗಳಾಗಿ ವಿಂಗಡಿಸುತ್ತಾರೆ.

1. ಸಂವೃತ್ತ ಸ್ವರ.
2. ವಿವೃತ್ತ ಸ್ವರ.

1. ಸಂವೃತ್ತ ಸ್ವರ :-

ನಾವು ಮಾತನಾಡುವಾಗ ತುಟಿಗಳು ಗುಂಡಾಕಾರಕ್ಕೆ ತಿರುಗಿ ಉಚ್ಚರಿಸುವ ಸ್ವರಗಳೇ ಸಂವೃತ್ತ ಸ್ವರಗಳು ಎಂದು ಕರೆಯುತ್ತಾರೆ.

ಉದಾ: ಉ, ಊ, ಋ, ಒ, ಓ = '5' ಅಕ್ಷರಗಳಿವೆ.

2. ವಿವೃತ್ತ ಸ್ವರ :-

ನಾವು ಮಾತನಾಡುವಾಗ ತುಟಿಗಳು ಗುಂಡಾಕಾರಕ್ಕೆ ತಿರುಗದೆ ಉಚ್ಚರಿಸುವ ಸ್ವರಗಳೇ ವಿವೃತ್ತ ಸ್ವರಗಳು ಎಂದು ಕರೆಯುತ್ತಾರೆ.

ಉದಾ: ಅ, ಇ, ಈ, ಎ, ಏ, ಐ = '6' ಅಕ್ಷರಗಳಿವೆ.

* ಸಂವೃತ್ತ ಮತ್ತು ವಿವೃತ್ತ ಸ್ವರಕ್ಕೆ ಬರುವ ಅಕ್ಷರ ಸ್ವರ- ಔ

# ಸವರ್ಣ ಸ್ವರಗಳು :- ಒಂದೇ ಜಾತಿಗೆ ಸೇರಿದ ಸ್ವರಗಳನ್ನು ಸವರ್ಣ ಸ್ವರಗಳು ಎಂದು ಕರೆಯುತ್ತಾರೆ.

* ಕನ್ನಡದಲ್ಲಿ ಒಟ್ಟು 6 ಸವರ್ಣ ಸ್ವರಗಳಿವೆ.

ಅವುಗಳೆಂದರೆ, ಅ-ಆ, ಇ-ಈ, ಉ-ಊ.

# ನಾಮಿ ಸ್ವರಗಳು :- 'ಅ' ಮತ್ತು 'ಆ' ವನ್ನು ಹೊರತು ಪಡಿಸಿ ಉಳಿದ ಸ್ವರಗಳನ್ನು ನಾಮಿ ಸ್ವರಗಳು ಎಂದು ಕರೆಯುತ್ತಾರೆ.

* 'ಅ' ಮತ್ತು 'ಆ' ಎಂಬ ಎರಡು ಸ್ವರಗಳು ನಾಮಿ ಸ್ವರಗಳಲ್ಲ, ಏಕೆಂದರೆ, ಅವು ತನ್ನ ಉಚ್ಚಾರದಲ್ಲಿ ಇವುಗಳನ್ನು ಸೇರಿಸುವಾಗ ಕಲಿಯುತ್ತವೆ.

2. ವ್ಯಂಜನಗಳು :-

ಸ್ವರಗಳ ಸಹಾಯದಿಂದ ಮಾತ್ರ ಉಚ್ಚರಿಸಲ್ಪಡುವ ಅಕ್ಷರಗಳಿಗೆ ವ್ಯಂಜನಗಳೆಂದು ಕರೆಯುತ್ತಾರೆ.

* ಕ್ ರಿಂದ ಳ್ ವರೆಗೆ ಇರುವ '34' ಅಕ್ಷರಗಳನ್ನು ವ್ಯಂಜನಗಳೆಂದು ಕರೆಯುತ್ತಾರೆ.

ಉದಾ: ವ್ಯಂಜನ + ಸ್ವರ = ವ್ಯಂಜನಾಕ್ಷರ.

ಕ್ + ಅ = ಕ.

ಕ್ + ಇ = ಕಿ.

ಕ್ + ಉ = ಕು.

ವ್ಯಂಜನಗಳ ಪ್ರಕಾರಗಳು

1. ವರ್ಗೀಯ ವ್ಯಂಜನಗಳು - 25. (ಕ್ - ಮ್)

| | | | | |
|---|---|---|---|---|
| ಕ್ | ಖ್ | ಗ್ | ಘ್ | ಙ್ |
| ಚ್ | ಛ್ | ಜ್ | ಝ್ | ಞ್ |
| ಟ್ | ಠ್ | ಡ್ | ಢ್ | ಣ್ |
| ತ್ | ಥ್ | ದ್ | ಧ್ | ನ್ |
| ಪ್ | ಫ್ | ಬ್ | ಭ್ | ಮ್ |

2. ಅವರ್ಗೀಯ ವ್ಯಂಜನಗಳು - 9 (ಯ್ - ಳ್)

ಯ್, ರ್, ಲ್, ವ್, ಶ್, ಷ್, ಸ್, ಹ್, ಳ್.

1) ವರ್ಗೀಯ ವ್ಯಂಜನಗಳು :-

'ಕ್' ವ್ಯಂಜನಾಕ್ಷರದಿಂದ 'ಮ್' ವ್ಯಂಜನಾಕ್ಷರದವರೆಗೆ ಇರುವ ಒಟ್ಟು '25' ಅಕ್ಷರಗಳನ್ನು ವ್ಯಂಜನಗಳೆಂದು ಕರೆಯುತ್ತಾರೆ.

* ವರ್ಗೀಯ ವ್ಯಂಜನಗಳಲ್ಲಿ '3' ಪ್ರಕಾರಗಳಿವೆ, ಅವುಗಳೆಂದರೆ,

1. ಅಲ್ಪಪ್ರಾಣ.
2. ಮಹಾಪ್ರಾಣ
3. ಅನುನಾಸಿಕ.

1) ಅಲ್ಪಪ್ರಾಣ :- ಅಲ್ಪ / ಕಡಿಮೆ ಉಸಿರಿನಿಂದ ಉಚ್ಛರಿಸಲ್ಪಡುವ ವ್ಯಂಜನಗಳನ್ನು 'ಅಲ್ಪಪ್ರಾಣ' ಎಂದು ಕರೆಯುತ್ತಾರೆ.

* ಕನ್ನಡದಲ್ಲಿ ಒಟ್ಟು '10' ಅಲ್ಪಪ್ರಾಣಗಳಿದ್ದಾವೆ, ಹಾಗೆಯೇ 1 ನೇ ಮತ್ತು 3 ನೇ ಸಾಲಿನಲ್ಲಿ ಕಂಡು ಬರುತ್ತವೆ.

ಅವುಗಳೆಂದರೆ.

| | | | | | | |
|---|---|---|---|---|---|---|
| 1 ನೇ ಸಾಲು - | ಕ್ | ಚ್ | ಟ್ | ತ್ | ಪ್ | - 5 |
| 3 ನೇ ಸಾಲು - | ಗ್ | ಜ್ | ಡ್ | ದ್ | ಬ್ | - 5 |

→ 10.

2) ಮಹಾಪ್ರಾಣ :- ಹೆಚ್ಚಿನ ಉಸಿರಿನಿಂದ ಉಚ್ಛರಿಸಲ್ಪಡುವ ವ್ಯಂಜನಗಳನ್ನು 'ಮಹಾಪ್ರಾಣ' ಎಂದು ಕರೆಯುತ್ತಾರೆ.

* ಕನ್ನಡದಲ್ಲಿ ಒಟ್ಟು '10' ಮಹಾಪ್ರಾಣಗಳಿದ್ದು, ಇವು ವರ್ಗೀಯ ವ್ಯಂಜನದ 2 ನೇ ಮತ್ತು 4 ನೇ ಸಾಲಿನಲ್ಲಿ ಕಂಡು ಬರುತ್ತವೆ.

ಅವುಗಳೆಂದರೆ,

| | | | | | | |
|---|---|---|---|---|---|---|
| 2 ನೇ ಸಾಲು - | ಖ್ | ಛ್ | ಠ್ | ಥ್ | ಫ್ | - 5 |
| 4 ನೇ ಸಾಲು - | ಘ್ | ಝ್ | ಢ್ | ಧ್ | ಭ್ | - 5 |

→ 10.

3) ಅನುನಾಸಿಕ :- ಮೂಗಿನ ಸಹಾಯದಿಂದ ಉಚ್ಛರಿಸಲ್ಪಡುವ ವ್ಯಂಜನಗಳನ್ನು 'ಅನುನಾಸಿಕ'ಗಳು ಎಂದು ಕರೆಯುತ್ತಾರೆ.

* ಕನ್ನಡದಲ್ಲಿ ಒಟ್ಟು '5' ಅನುನಾಸಿಕಗಳಿದ್ದು, ಇವು ವರ್ಗೀಯ ವ್ಯಂಜನದ ಕೊನೆಯ / ಐದನೇ ಸಾಲಿನಲ್ಲಿ ಕಂಡು ಬರುತ್ತವೆ.

ಅವುಗಳೆಂದರೆ,

| | | | | | |
|---|---|---|---|---|---|
| 5 ನೇ ಸಾಲು | ಙ್ | ಞ್ | ಣ್ | ನ್ | ಮ್ |

→ 5.